ಆ) ಹೀರೇಹಳ್ಳ ಜಲಾಶಯದ ಪುನರ್ವಸತಿ ಸಮಿತಿಯ ಶಿಫಾರಸ್ಸಿನಂತೆ ಮುದ್ದಾಪುರ ಗ್ರಾಮಕ್ಕೆ ಪುನರ್ವಸತಿ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕಬಿನಿ ಏತ ನೀರಾವರಿ ಯೋಜನೆ ಸರ್ವೆ ಕಾರ್ಯ

815 - ಶ್ರೀ ಕೃಷ್ಣಮೂರ್ತಿ ಎ.ಆರ್ (ಸಂತೇಮಾರನಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಏತ ನೀರಾವರಿ ಯೋಜನೆ ಸರ್ವೇ ಕಾರ್ಯವು ಯಾವ ಹಂತದಲ್ಲಿದೆ. ಹಾಗೂ ಸರ್ವೇ ಕಾರ್ಯವು ಎಂದು ಪೂರ್ಣಗೊಳ್ಳುವುದು. ಸರ್ವೇ ಕಾರ್ಯಕ್ಕಾಗಿ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು?

ಆ) ಕಬಿನಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು 2000-1ನೇ ಸಾಲಿನ ಆಯವ್ಯದಲ್ಲಿ ಎಷ್ಟು ಹಣವನ್ನು ಈ ಯೋಜನೆಗೆ ಮಂಜೂರು ಮಾಡಲಾಗಿದೆ. ಈ ಕಾಮಗಾರಿಯನ್ನು ಎಂದು ಪ್ರಾರಂಭ ಮಾಡಲಾಗುವುದು. ಪೂರ್ಣಗೊಳ್ಳಲು ತೆಗೆದುಕೊಳ್ಳುವ ಅವಧಿ ಎಷ್ಟು?

ಇ) ಕೃಷ್ಣ ಭಾಗ್ಯ ಜಲ ನಿಗಮದಂತೆ ಕಬಿನಿ ಜಲ ನಿಗಮ ಸ್ಥಾಪನೆ ಮಾಡುವ ಉದ್ದೇಶವಿದೆಯೇ?

ಈ) ಹೊಂಗನೂರು ಹಿರಿಕೆರೆ ಏತ ನೀರಾವರಿ ಯೋಜನೆಗೆ 2000-2001ನೇ ಸಾಲಿನಲ್ಲಿ ಆಯವ್ಯಯದಲ್ಲಿ ಮಂಜೂರಾಗಿರುವ ಹಣ ಎಷ್ಟು?

ಉ) ಪ್ರಸ್ತುತ ಈ ಯೋಜನೆಯ ಕಾರ್ಯ ಯಾವ ಹಂತದಲ್ಲಿದೆ?

ಊ) ಈ ಯೋಜನೆ ಪೂರ್ಣಗೊಳ್ಳತಕ್ಕ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಕಬಿನಿ ಏತ ನೀರಾವರಿ ಯೋಜನೆಯ ಬಿದರಹಳ್ಳಿ ಏತ ನೀರಾವರಿ ಕಾಲುವೆಯ 20 ಮೀ. ಉದ್ದದ ಮುಖ್ಯ ನಾಲೆಯ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಮುಂದಿನ ಭಾಗವು ಪ್ರಗತಿಯಲ್ಲಿದೆ. ಈ ಕಾರ್ಯವನ್ನು 2000-01ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಈ ಸರ್ವೆ ಕಾರ್ಯಕ್ಕಾಗಿ ರೂ.15 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ಆ) ಕಬಿನಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ. 622.50 ಕೋಟಿಗಳು. ಈ ಕಾಮಗಾರಿಯನ್ನು 2000-01ನೇ ಸಾಲಿನಲ್ಲಿ ಪ್ರಾರಂಭ ಮಾಡಲು ಯೋಜಿಸಲಾಗಿದೆ. 3 ರಿಂದ 4 ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ.

ಈ) ಆಯವ್ಯಯದಲ್ಲಿ ಕಬಿನಿ ಯೋಜನೆಗೆ ನಿಗಧಿಪಡಿಸಲಾದ ಅನುದಾನದಲ್ಲಿ ಈ ಕಾಮಗಾರಿಗೆ ಅನುದಾನ ಒದಗಿಸಲಾಗುವುದು.

ಉ) ಈ ಯೋಜನೆಯ ಅಂದಾಜಿಗೆ ಮಂಜೂರಾತಿ ದೊರಕಿದ್ದು, ಟೆಂಡರ್ ಕರೆಯಲಾಗುತ್ತಿದೆ.

ಊ) ಈ ಯೋಜನೆಯನ್ನು 2001-02ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಆಸುಂಡಿ ನಾಲಾ ಬಂದರು

812 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ತಾಲ್ಲೂಕಿನ ಆಸುಂಡಿ ನಾಲಾ ಬಂದರನ್ನು ಆಯವ್ಯಯದಲ್ಲಿ ಸೇರಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಈ ವರ್ಷ ಅದಕ್ಕೆ ಪೂರ್ಣ ಅನುದಾನ ಬಿಡುಗಡೆ ಮಾಡಿ ಪೂರ್ಣಗೊಳಿಸಲಾಗುವುದೇ?*

ಶ್ರೀ ಎಸ್. ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 0.01ರಷ್ಟು ಅನುದಾನದೊಂದಿಗೆ ಸೇರಿಸಲಾಗಿದೆ.

ಆ) ಈ ವರ್ಷ ಸಾಂಕೇತಿಕ ಅನುದಾನ (1 ಸಾವಿರ) ಇರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

ಗಾಜನೂರ ಹತ್ತಿರ ಕಟ್ಟುತ್ತಿರುವ ಅಣೆಕಟ್ಟು

814 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಗಾಜನೂರ ಹತ್ತಿರ ಕಟ್ಟುತ್ತಿರುವ ಅಣೆಕಟ್ಟು ಯಾವ ಹಂತದಲ್ಲಿದೆ, ಅದರ ಯೋಜನಾ ವೆಚ್ಚವೆಷ್ಟು? ಎಂದು ಮುಗಿಯುತ್ತದೆ.*

ಆ) *ಹಾವೇರಿ ಜಿಲ್ಲೆಯಲ್ಲಿನ ಕಾಲುವೆಗಳ ಉದ್ದ ಅಳತೆ ಎಷ್ಟು?*

ಇ) *ಹಾವೇರಿ ಜಿಲ್ಲೆಯಲ್ಲಿ ಸುರಂಗ ಮಾರ್ಗವೆಷ್ಟು ಉದ್ದ ಅಳತೆ ಇದೆ ಅದನ್ನು ಎಂದು ಪ್ರಾರಂಭಿಸಲಾಗುತ್ತದೆ?*

ಈ) *ಈ ಯೋಜನೆಯನ್ನು ಪೂರ್ಣಗೊಳಿಸಿ ರೈತರ ಹೊಲಗಳಿಗೆ ನೀರು ಸರಬರಾಜು ಮಾಡುವುದು ಎಂದು?*